ಶ್ರೀ ಎಂ.ಜಿ. ಜರತಾರ್‌ಗರ್.—ಧಾರವಾಡ ಜಿಲ್ಲೆ ಉಪ ನಿರ್ದೇಶಕರ ಕಚೇರಿಯಲ್ಲಿ ಶಿಕ್ಷಕರ ವರ್ಗಾವಣೆಗೆ ಸಂಬಂಧಪಟ್ಟಂತೆ ಭ್ರಷ್ಟಾಚಾರ ನಡೆಯುತ್ತಿದ್ದು ಇದನ್ನು ನಿಲ್ಲಿಸುವುದಕ್ಕೆ ಸರ್ಕಾರ ದವರು ಏನು ಕ್ರಮ ತೆಗೆದುಕೊಂಡಿರುತ್ತಾರೆ. ಸಿಬ್ಬಂದಿಯ ಮೇಲೆ ದೂರು ಇದ್ದರೂ ಅವರು ಕಳೆದ ಹತ್ತಾರು ವರ್ಷಗಳಿಂದ ಒಂದೇ ಕಡೆ ಇದ್ದು ಶಿಕ್ಷಕರಿಗೆ ತೊಂದರೆಯನ್ನು ಕೊಡುತ್ತಿರುವುದರಿಂದ ಅವರನ್ನು ಸಂಪೂರ್ಣವಾಗಿ ಕಿತ್ತು ಬೇರೆ ಕಡೆ ಹಾಕಿ ಹೊಸಬರನ್ನು ತರತಕ್ಕಂಥ ವ್ಯವಸ್ಥೆಯನ್ನು ಮಾನ್ಯ ಸಚಿವರು ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಹತ್ತಾರು ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕದ್ದನ್ನು ಒಂದೇ ಬಾರಿಗೆ ಪರಿಹರಿಸುವುದು ಕಷ್ಟವಾಗುತ್ತದೆ, ಯಾರು ಯಾರು ಭ್ರಷ್ಟಾಚಾರದಲ್ಲಿ ನಿರತರಾಗಿರುತ್ತಾರೆ ಅಂಥವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೆ ಕೆಂದು ನಿರ್ದೇಶನ ಕೊಟ್ಟಿರುತ್ತೇವೆ. ಯಾರು ಶಿಕ್ಷಕರಿಗೆ ಬಾಕಿ ಹಣವನ್ನು ಕೊಡಬೇಕಾಗಿರುತ್ತದೋ ಅವರ ಸಲುವಾಗಿ ೧೦೦ ಲಕ್ಷ ರೂಪಾಯಿಗಳನ್ನು ಒದಗಿಸಿ ಕೊಟ್ಟಿದ್ದೇವೆ. ಆದರೆ ೨೪೮ ಲಕ್ಷ ರೂಪಾಯಿಗಳು ಬೇಕೆಂದು ಕೇಳಿರುತ್ತಾರೆ. ಹೆಚ್ಚುವರಿ ಹಣವನ್ನು ಕೇಳಿರುವುದರಿಂದ ಆರ್ಡಿನೆನ್ಸ್ ಹೊರಡಿಸಿ ಕೊಡಬೆಕಾಗಿರುತ್ತದೆ. ಇದರಿಂದ ಸ್ವಲ್ಪ ತಡವಾಗಿರುತ್ತದೆ.

ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಸಾರ್ವಜನಿಕ ಗ್ರಂಥಾಲಯಂಗಳನ್ನು ಪ್ರಾರಂಭಿಸುವುದು

೧೦೭ (೧೯೯) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ೧೯೮೩–೮೪ನೇ ಸಾಲಿನಲ್ಲಿ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಹೊಸದಾಗಿ ಸಾರ್ವಜನಿಕ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆಯೇ ? ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸಬೇಕು)

ಆ) ಹೊಸ ಸಾರ್ವಜನಿಕ ಗ್ರಂಥಾಲಯಗಳನ್ನು ಪ್ರಾರಂಭಿಸಲು ಸರ್ಕಾರದವರು ಮಾಡಿದ ವೆಚ್ಚ ಎಷ್ಟು?

ಇ) ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ಹೆಚ್ಚಿನ ಗ್ರಂಥಾಲಯಗಳ ಸೌಲಭ್ಯ ಒದಗಿಸಲು ಸರ್ಕಾರದವರು ಯಾವುದಾದರೂ ಹೊಸ ಯೋಜನೆಗಳನ್ನು ಹಾಕಿಕೊಂಡಿದ್ದಾರೆಯೆ?

ಈ) ಹಾಗಿದ್ದಲ್ಲಿ ಅವುಗಳನ್ನು ಕಾರ್ಯಗತ ಮಾಡಲು ಎಷ್ಟು ದಿನಗಳು ಬೇಕು?

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).—

ಅ) ಹೌದು. ೩೦. (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಆ) ೧,೯೬,೬೧೬–೦೦ ರೂ.

ಇ) ಹೊಸ ಯೋಜನೆಯ ಅವಶ್ಯಕತೆ ತೋರುತ್ತಿಲ್ಲ. ಈಗಿರುವ ಯೋಜನೆಯಡಿಯಲ್ಲಿಯೇ ಇನ್ನೂ ೭೦ ಗ್ರಂಥಾಲಯಗಳನ್ನು ೧೯೮೩–೮೪ರಲ್ಲಿ ತೆರೆಯಲು ಅವಕಾಶವಿದೆ.

ಈ) ೧೯೮೩–೮೪ನೇ ಸಾಲಿನೊಳಗಾಗಿ ಉಳಿದ ಗ್ರಂಥಾಲಯಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದು.

೧೯೮೩–೮೪ನೇ ಸಾಲಿನಲ್ಲಿ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಹೊಸದಾಗಿ ತೆರೆಯಲಾದ ಗ್ರಂಥಾಲಯಗಳ ಪಟ್ಟಿ.

ಸಂಖ್ಯೆ	ಜಿಲ್ಲೆಯ ಹೆಸರು	ಗ್ರಂಥಾಲಯ ಪ್ರಾರಂಭವಾದ ಸ್ಥಳ	ಪ್ರಾರಂಭವಾದ ದಿನಾಂಕ
೧	೨	೩	೪
೧	ಗುಲ್ಬರ್ಗಾ ಜಿಲ್ಲೆ	ಡೊಂಗರ ಗಾಂವ	೧–೭–೧೯೮೩
೨	–,,–	ನಿಂಬರಗಾ	೨–೭–೧೯೮೩
೩	–,,–	ಚಂಡರಕಿ	೧೬–೭–೧೯೮೩
೪	–,,–	ಉಡಚಣ	೪–೮–೧೯೮೩
೫	–,,–	ತಡಕಲ	೨೫–೮–೧೯೮೩
೬	ಚಿತ್ರದುರ್ಗ ಜಿಲ್ಲೆ	ಕಿಟ್ಟದ ಹಾಳ್	೧–೮–೧೯೮೩
೭	–,,–	ರಾಂಪುರ	೧–೮–೧೯೮೩
೮	–,,–	ಹರಿಯಬ್ಬೆ	೧–೮–೧೯೮೩
೯	–,,–	ಹೊಳಿಸಿರಿಗೆರೆ	೧–೮–೧೯೮೩
೧೦	–,,–	ದೊಡ್ಡ ಚಲ್ಲೂರು	೧–೮–೧೯೮೩
೧೧	ತುಮಕೂರು ಜಿಲ್ಲೆ	ಬಿಳಿಗೆರೆ	೧–೮–೧೯೮೩
೧೨	–,,–	ಶೆಟ್ಟಿಕೆರೆ	೧–೮–೧೯೮೩
೧೩	–,,–	ಹೊನ್ನುಡಿಕೆ	೧–೮–೧೯೮೩
೧೪	–.,–	ದ್ವಾರಣ ಕುಂಟೆ	೧–೮–೧೯೮೩
೧೫	–,,–	ಜಯಚಾಮರಾಜಪುರ	೧–೮–೧೯೮೩
೧೬	ಕೋಲಾರ ಜಿಲ್ಲೆ	ನಂದಿ	೨೫–೭–೧೯೮೩
೧೭	–,,–	ಗುಡಿಪಲ್ಲಿ	೧೭–೮–೧೯೮೩
೧೮	–,,–	ಶಿವಾರಪಟ್ಟ	೫–೮–೧೯೮೩
೧೯	–,,–	ಚನ್ನಸಂದ್ರ	೪–೮–೧೯೮೩
೨೦	–,,–	ಮಂಡಿಕಲ್ಲು	೨೯–೭–೧೯೮೩
೨೧	ಬಿದರ್ ಜಿಲ್ಲೆ	ಮುಧೋಳ್	೫–೯–೧೯೮೩
೨೨	–,,–	ಮನ್ನಾ ಎ ಕೆಳ್ಳಿ	೬–೯–೧೯೮೩
೨೩	–,,–	ಮರುದಾಪುರ	೧೬–೯–೧೯೮೩
೨೪	–,,–	ಗಡಿಗೊಂಡಗಾಂವ	೨೪–೧೦–೧೯೮೩
೨೫	–,,–	ಧನ್ನೊರ	೧೨–೧೨–೧೯೮೩
೨೬	ಬೆಳಗಾಂ ಜಿಲ್ಲೆ	ಅನಿಗೋಳ	೧೫–೮–೧೯೮೩
೨೭	–,,–	ನಾಗರಮಾನವಳ್ಳಿ	೧೫–೮–೧೯೮೩
೨೮	–,,–	ಅಥಣಿ	೨೧–೮–೧೯೮೩
೨೯	–,,–	ಮೊರಬ	೨–೧೦–೧೯೮೩
೩೦	–,,–	ದೇಶನೂರ	೧–೧೧–೧೯೮೩

ಶ್ರೀ ಜ್ಞಾನದೇವ ದೊಡ್ಡಮೇಟಿ.— ಈ ಜಿಲ್ಲಾವಾರು ಪಟ್ಟಿಯಲ್ಲಿ ಧಾರವಾಡ ಜಿಲ್ಲೆಯನ್ನು ಸೇರಿಸಿಲ್ಲ. ಆದ್ದರಿಂದ ಧಾರವಾಡ ಜಿಲ್ಲೆಯನ್ನು ಸಹ ಇದರಲ್ಲಿ ಸೇರಿಸುತ್ತೀರಾ?

ಶ್ರೀ ಬಿ. ರಾಚಯ್ಯ.— ಎಲ್ಲಾ ಜಿಲ್ಲೆಗಳಲ್ಲಿಯೂ ಸಹ ಈ ಒಂದು ಅನುಕೂಲವನ್ನು ಕಲ್ಪಿಸಿ ಕೊಡಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆ. ಈ ಅನುಕೂಲ ಇಲ್ಲದ ಕಡೆಗಳಲ್ಲಿ ಗ್ರಂಥಾಲಯ ಗಳನ್ನು ಈ ವರ್ಷದ ಕೊನೆಯೊಳಗಾಗಿ ತೆರೆಯಲು ಪ್ರಯತ್ನ ಮಾಡುತ್ತೇವೆ.

ಶ್ರೀ ಜ್ಞಾನದೇವ ದೊಡ್ಡಮೇಟಿ.— ಈ ಸಾರ್ವಜನಿಕ ಗ್ರಂಥಾಲಯಗಳನ್ನು ಬೇಡಿಕೆ ಇರುವ ಗ್ರಾಮಗಳವರು ಪೂರ್ವಭಾವಿಯಾಗಿ ಏನಾದರೂ ಕರಾರುಗಳನ್ನು ಮಾಡಿಕೊಳ್ಳುವುದು ಇದೆಯೇ?

ಶ್ರೀ ಬಿ. ರಾಚಯ್ಯ.— ಕಟ್ಟಡಗಳನ್ನು ಮತ್ತು ಪೀಠೋಪಕರಣಗಳನ್ನು ಒದಗಿಸಿಕೊಟ್ಟರೆ ನಾವು ಅಲ್ಲಿಗೆ ಸಿಬ್ಬಂದಿ ವರ್ಗದವರನ್ನು ಹಾಕಿ ಪುಸ್ತಕಗಳನ್ನು ಒದಗಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಜ್ಞಾನದೇವ ದೊಡ್ಡಮೇಟಿ.— ಕಟ್ಟಡಗಳನ್ನು ಸಾರ್ವಜನಿಕರೇ ಕಟ್ಟಿಸಿಕೊಡಬೇಕೇ ಅಥವಾ ಬಾಡಿಗೆ ಕಟ್ಟಡಗಳನ್ನು ಒದಗಿಸಿಕೊಟ್ಟರೆ ಸಾಕೇ?

ಶ್ರೀ ಬಿ. ರಾಚಯ್ಯ.— ಕಟ್ಟಡಗಳನ್ನು ಸಾರ್ವಜನಿಕ ವಂತಿಗೆ ಮೂಲಕ ಕಟ್ಟಿಸಿಕೊಟ್ಟರೆ ಒಳ್ಳೆಯದು.

ಶ್ರೀ ಮಲ್ಲಾರಗೌಡ ಪಾಟೀಲ್.— ಈ ಸಾರ್ವಜನಿಕ ಗ್ರಂಥಾಲಯಗಳು ಇಲ್ಲದಿರುವ ಕಡೆಗಳಲ್ಲಿ ಕಟ್ಟಡಗಳನ್ನು ಮತ್ತು ಇನ್ನಿತರ ಸೌಲಭ್ಯಗಳನ್ನು ಸರ್ಕಾರದಿಂದಲೇ ಒದಗಿಸಿಕೊಡಲು ಏನಾದರೂ ಯೋಜನೆಯನ್ನು ಹಾಕಿಕೊಂಡಿದ್ದೀರಾ? ಈ ಬಗ್ಗೆ ಏನಾದರೂ ಒಂದು ನಿಶ್ಚಿತವಾದ ಕಾರ್ಯಕ್ರಮ ವನ್ನು ಹಾಕಿಕೊಂಡಿದ್ದೀರಾ?

ಶ್ರೀ ಬಿ. ರಾಚಯ್ಯ.— ಈ ಸಲಹೆಯನ್ನು ನೋಡೋಣ.

ಆರ್. ಟಿ. ಎಸ್. ಸಂಸ್ಥೆಯ ದುರಾಡಳಿತ

೧೦೮ (೨೩೮) ಶ್ರೀ ಬಿ.ಜಿ. ಪಾಟೀಲ್ (ರಾಣಿಬೆನ್ನೂರು).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಣಿಬೆನ್ನೂರಿನಲ್ಲಿರುವ ಆರ್‌ಟಿಎಸ್ ಸಂಸ್ಥೆಯ ಕಾಲೇಜಿನ ದುರಾಡಳಿತದ ಬಗ್ಗೆ ನಿರ್ದೇಶಕರಾದ ಶ್ರೀಮತಿ ಸೆಲ್ವಿದಾಸರು ಸರಕಾರಕ್ಕೆ ಒಂದು ವರದಿಯನ್ನು ಸಲ್ಲಿಸಿದ್ದು ಆದು ಸರಕಾರದ ಗಮನದಲ್ಲಿದೆಯೆ?

ಆ) ಹಾಗಿದ್ದಲ್ಲಿ ಸರಕಾರವು ವರದಿಯ ಬಗ್ಗೆ ಈವರೆಗೆ ಯಾವ ಕ್ರಮವನ್ನೂ ಕೈಗೊಳ್ಳದಿರುವುದಕ್ಕೆ ಕಾರಣವೇನು?

ಇ) ಇನ್ನು ಮೇಲಾದರೂ ಆ ಸಂಸ್ಥೆಯ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).—

ಅ) ಇದೆ.

ಆ) ಪೂರ್ಣ ಮಾಹಿತಿ ಬಂದಿಲ್ಲದಿರುವುದರಿಂದ.

ಇ) ಪೂರ್ಣ ಮಾಹಿತಿ ಶೀಘ್ರದಲ್ಲೇ ತರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಿ.ಜಿ. ಪಾಟೀಲ್.—ಇದು ಸರ್ಕಾರದ ಗಮನದಲ್ಲಿದೆ ಎಂದು ಹೇಳಿದ್ದಾರೆ. ಆದರೆ ಇಲ್ಲಿಯವರೆಗೆ ಪೂರ್ಣ ಮಾಹಿತಿಯನ್ನು ತರಿಸಿಕೊಳ್ಳದಿರಲು ಕಾರಣವೇನು?

ಶ್ರೀ ಬಿ. ರಾಚಯ್ಯ.— ಅವರು ನಮಗೆ ಬೇಗ ಮಾಹಿತಿಯನ್ನು ಒದಗಿಸಿಕೊಡುತ್ತಿಲ್ಲ ನಾನು ಎರಡು ಸಲ ಅಲ್ಲಿಗೆ ನಮ್ಮ ಡೆಪ್ಯೂಟಿ ಡೈರೆಕ್ಟರನ್ನು ಕಳುಹಿಸಿಕೊಟ್ಟಿದ್ದೆ. ಆದರೂ ಅವರು ಮಾಹಿತಿ ಒದಗಿಸಿಲ್ಲ. ಒಂದುಸಲ ಸಂಬಂಧಪಟ್ಟವರು ಇಲ್ಲವೆಂದು ಹೇಳಿದರೆ ಮತ್ತೊಂದು ಸಲ ಕೊಠಡಿಗೆ ಬೀಗ